ಉ) **1. ತಮದಡ್ಡಿ ಮತ್ತು ತೇರದಾಳ ರಸ್ತೆ ಎತ್ತರಿಸುವುದು:**

ಈ ರಸ್ತೆಯ ಪಟ್ಟು ಉದ್ದ 3 ಕಿ.ಮೀ. ಇದ್ದು, ಸದರಿ ರಸ್ತೆಯನ್ನು 2 ರಿಂದ 3 ಮೀಟರ್‌ವರೆಗೆ ಎತ್ತರಿಸಬೇಕಾಗುತ್ತದೆ. ಈ ರಸ್ತೆಯನ್ನು ಎತ್ತರಿಸುವು ದರಿಂದ 5 X 4 ಮೀಟರ್ ಅಳತೆಯ ಬಾಕ್ಸ್ ಕಲ್ವರ್ಟ್ ಹಾಗೂ 12 ಪೈಪ್ ಅಡ್ಡಮೋರಿಗಳ ಕಾಮಗಾರಿಯನ್ನು ನಿರ್ಮಿಸಬೇಕಾಗಿರುತ್ತದೆ. ಇದಕ್ಕಾಗಿ ರೂ. 4.5 ಕೋಟಿಗಳ ಅನುದಾನದ ಅವಶ್ಯಕತೆ ಇದ್ದು, 3054 ಲೆಕ್ಕಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನ ದೊರೆತ ನಂತರ ಕಾಮಗಾರಿಯನ್ನು ನಿಯಮಾನುಸಾರ ಕೈಗೆತ್ತಿಕೊಳ್ಳಲಾಗುವುದು.

2. ಅಸ್ಕಿ–ಆಸಂಗಿ ರಸ್ತೆ ಎತ್ತರಿಸುವುದು:

ಈ ರಸ್ತೆಯ ಒಟ್ಟು ಉದ್ದ 2.50 ಕಿ.ಮೀ. ಇದ್ದು ಸದರಿ ರಸ್ತೆಯನ್ನು 1 ರಿಂದ 2 ಮೀಟರ್‌ವರೆಗೆ ಎತ್ತರಿಸಬೇಕಾಗುತ್ತದೆ. ಈ ರಸ್ತೆಯನ್ನು ಎತ್ತರಿಸುವು ದರಿಂದ 6 ಪೈಪ್ ಅಡ್ಡಮೋರಿಗಳ ಕಾಮಗಾರಿಯನ್ನು ನಿರ್ಮಿಸಬೇಕಾಗುತ್ತದೆ. ಇದಕ್ಕಾಗಿ ರೂ.2.5 ಕೋಟಿಗಳ ಅನುದಾನದ ಅವಶ್ಯಕತೆ ಇದ್ದು, 3054 ಲೆಕ್ಕಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನ ದೊರೆತ ನಂತರ ಕಾಮಗಾರಿಯನ್ನು ನಿಯಮಾನುಸಾರ ಕೈಗೆತ್ತಿಕೊಳ್ಳ–ಲಾಗುವುದು.

1037 ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಪ್ಪರಗಿ ಹಿನ್ನೀರಿನಿಂದ ಮುಳುಗಡೆ ಆಗಲಿರುವ ಜಮಖಂಡಿ ತಾಲ್ಲೂಕಿನ ಗ್ರಾಮಗಳಾವುವು; ಅವುಗಳನ್ನು ಸ್ಥಳಾಂತರಿಸುವ ಕೆಲಸ ಯಾವ ಹಂತದಲ್ಲಿ ಇದೆ;

ಆ) ಸುಮಾರು ಮೂರು ವರ್ಷಗಳಿಂದ ಯೋಜನೆಯಲ್ಲಿ ಮುಳುಗಡೆ ಯಾಗಲಿರುವ ಗ್ರಾಮಗಳು ಮಳೆಗಾಲದಲ್ಲಿ ನೀರಿನಿಂದ ಸುತ್ತುವರಿಯಲ್ಪಟ್ಟು ಬಹಳಷ್ಟು ತೊಂದರೆಗೆ ಸಿಕ್ಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಜಮಖಂಡಿ ಮತ್ತು ಮುಧೋಳ ತಾಲ್ಲೂಕಿನಲ್ಲಿ ತೇರದಾಳ ಮತಕ್ಷೇತ್ರಕ್ಕೆ ಸೀಮಿತವಾಗಿ ಮಹಾಪೂರದಲ್ಲಿ ಮುಳುಗಡೆ ಆಗುತ್ತಿರುವ ಗ್ರಾಮಗಳು ಎಷ್ಟು ಮತ್ತು ಯಾವುವು;

ಈ) ಸದರಿ ಗ್ರಾಮಗಳ ಸ್ಥಳಾಂತರದ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ;

ಉ) ತೇರದಾಳ ಮತಕ್ಷೇತ್ರದಲ್ಲಿ ಪ್ರವಾಹದಿಂದಾಗಿ ತೊಂದರೆಗೊಳಗಾದ ಸಂತ್ರಸ್ಥರಿಗೆ ಎಷ್ಟು ಆಶ್ರಯ ಮನೆಗಳನ್ನು ಕಟ್ಟಿಸಲಾಗಿದೆ; ಮಂಜೂರು ಆದ ಮನೆಗಳೆಷ್ಟು; ಈಗ ಅದು ಯಾವ ಹಂತದಲ್ಲಿ ಇವೆ?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹಿಪ್ಪರಗಿ ಅಣೆಕಟ್ಟು ಹಿನ್ನೀರಿನಿಂದ ಜಮಖಂಡಿ ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳು ಮುಳುಗಡೆಯಾಗುತ್ತವೆ:

1) ಕುಲಹಳ್ಳಿ (ಭಾಗಶಃ ಮುಳುಗಡೆ)
2) ಹಿಪ್ಪರಗಿ (ಭಾಗಶಃ ಮುಳುಗಡೆ)
3) ಆಸ್ಕಿ (ಪೂರ್ಣ ಮುಳುಗಡೆ)
4) ತಮದಡ್ಡಿ (ಪೂರ್ಣ ಮುಳುಗಡೆ)

ಹಿಪ್ಪರಗಿ ಬ್ಯಾರೇಜಿನಿಂದ ಬಾಧಿತವಾಗಿರುವ ಇತರೆ ಗ್ರಾಮಗಳೊಂದಿಗೆ ಈ ನಾಲ್ಕು ಗ್ರಾಮಗಳನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು ರೂ.555 ಕೋಟಿ ವೆಚ್ಚದ ಪುನರ್ವಸತಿ ಯೋಜನೆಯನ್ನು ಮಂಜೂರು ಮಾಡಲಾಗಿದೆ.

ಆ) ಬಂದಿದೆ.

ಇ) 2 ಗ್ರಾಮಗಳು.

(1) ಹಳಿಂಗಳಿ (2) ಮದನಮಟ್ಟಿ

ಈ) ಪ್ರಕೃತಿ ವಿಕೋಪ ನಿರ್ವಹಣೆ ಅಡಿಯಲ್ಲಿ ಈ ಗ್ರಾಮಗಳನ್ನು ಸ್ಥಳಾಂತರಿಸಲು 2006ರಲ್ಲಿ ಮಂಜೂರಾತಿ ನೀಡಲಾಗಿದೆ.

ಉ) ಆಶ್ರಯ ಯೋಜನೆಯಡಿ ಯಾವುದೇ ಮನೆಗಳನ್ನು ಮಂಜೂರು ಮಾಡಿರುವುದಿಲ್ಲ. ಆದರೆ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 2005–06ನೇ ಸಾಲಿನಲ್ಲಿ ಈ ಕೆಳಕಂಡಂತೆ ಮನೆಗಳನ್ನು ಮಂಜೂರು ಮಾಡಲಾಗಿದೆ:

1) ಆಸ್ಕಿ – 13 ಮನೆಗಳು
2) ಕುಲಹಳ್ಳಿ – 13 ಮನೆಗಳು
3) ಹಿಪ್ಪರಗಿ – 16 ಮನೆಗಳು